ಡಾ॥ ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

1) ರಾಜ್ಯದಲ್ಲಿ ಒಟ್ಟು 4 ಸರ್ಕಾರಿ ವೈದ್ಯಕೀಯ ವಿದ್ಯಾಲಯಗಳು ಮತ್ತು ಒಂದು ಸರ್ಕಾರಿ ದಂತ ವಿದ್ಯಾಲಯವು ಇರುವುವು ಮತ್ತು ಈ ವಿದ್ಯಾಲಯಗಳಲ್ಲಿ ಇರುವ ಪ್ರವೇಶ ಸಾಮರ್ಥ್ಯ ಈ ಕೆಳಕಂಡಂತಿದೆ.

ಅ)	ಬೆಂಗಳೂರು ವೈದ್ಯಕೀಯ ಮಹಾ ವಿದ್ಯಾಲಯ, ಬೆಂಗಳೂರು	-	150
ಆ)	ಮೈಸೂರು ವೈದ್ಯಕೀಯ ಮಹಾ ವಿದ್ಯಾಲಯ, ಮೈಸೂರು	-	100
ಇ)	ವಿಜಯನಗರ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬಳ್ಳಾರಿ	-	100
ಈ)	ಕರ್ನಾಟಕ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಹುಬ್ಬಳ್ಳಿ	-	50
ಉ)	ಸರ್ಕಾರಿ ದಂತ ವೈದ್ಯಕೀಯ ವಿದ್ಯಾಲಯ ಬೆಂಗಳೂರು	-	60

2) ಇಲ್ಲ

3) ಉದ್ಭವಿಸುವುದಿಲ್ಲ

4) ಉದ್ಭವಿಸುವುದಿಲ್ಲ

ಕಾಲೇಜು ಶಿಕ್ಷಕರ ನೇಮಕಾತಿಯಲ್ಲಿ ಎನ್.ಇ.ಟಿ. ಪರೀಕ್ಷೆ ಕಡ್ಡಾಯ

423 (681) ಡಾ॥ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಕಾಲೇಜು ಶಿಕ್ಷಕರ ನೇಮಕಾತಿಯಲ್ಲಿ ಸರ್ಕಾರ ಎನ್. ಇ.ಟಿ. ಪಾಸಾಗಿರಬೇಕೆಂಬ ಅಂಶವನ್ನು ಕಡ್ಡಾಯಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

2) ಎನ್.ಇ.ಟಿ. ಪರೀಕ್ಷೆಯನ್ನು ನಡೆಸುವ ಪೂರ್ವದಲ್ಲಿ ನೇಮಕಗೊಂಡ ಶಿಕ್ಷಕರಿಗೆ ಈ ಅಂಶ ಕಡ್ಡಾಯಗೊಳಿಸುವುದು ಸರಿಯೆ?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಶಿಕ್ಷಣ ಸಚಿವರು) :

1) ಹೌದು

2) ದಿನಾಂಕ 19-09-91 ರಲ್ಲಿ ಯು.ಜಿ.ಸಿ. ರೆಗ್ಯೂಲೇಷನ್‌ಗಳು ಜಾರಿಗೆ ಬಂದಿದ್ದು, ಅದಕ್ಕೂ ಮೊದಲು ಮಂಜೂರಾದ ಖಾಲಿ ಹುದ್ದೆಗಳಲ್ಲಿ ಖಾಯಂ ನೇಮಕಾತಿ ಹೊಂದಿದ ಶಿಕ್ಷಕರಿಗೆ ಈ ಅಂಶವನ್ನು ಕಡ್ಡಾಯಗೊಳಿಸಿರುವುದಿಲ್ಲ.

ವಿಶ್ವಬ್ಯಾಂಕಿನಿಂದ ಪಾಲಿಟೆಕ್ನಿಕ್ ಅಭಿವೃದ್ಧಿಗಾಗಿ ಹಣ ಬಿಡುಗಡೆ

424 (642) ಡಾ॥ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?